Loans granted to co-operative Societies.

*Q.—115. Sri ANDANAIAH (Kunigal).—

Will the Government be pleased to state :—

(*a*) the different types of Co-operative Societies that are working in Chikkonahalli Village, Huliyurdurga Hobli, Kunigal Taluk in Tumkur District;

(*b*) the amount of loan (*i.e.* short term loan, medium term loan and produce loan) granted to the said societies so far;

(*c*) the amount of loan recovered so far from these societies ?

A.—Sri K. PUTTASWAMY (Minister for Co-operation and Housing).—

(*a*), (*b*) and (*c*) *Vide* statement appended.

STATEMENT

(SRI K. PUTTASWAMY)

(a) Different types of Co-operative Societies.	(b) Amount of loan granted.			(c) Amount of loan recovered.		
	Short term	Medium Term	Produce loan	Short term	Medium Term	Produce loan
	Rs.	Rs.	Rs.	Rs.	Rs.	Rs.
1 Chikkonahally Service Co-operative Society.	29,625	27,900	12,175	9,910	17,900	Nil
2 Joint Farming Co-operative Society, Chikkonahally.	Nil	4,000	3,750 (Godown-*cum*-Cattle shed.)	...	...	...
3 Oil Ghana Industrial Co-operative Society, Chikkonahally.	...	...	8,437-50 (Industrial loan by Khadi Board).	...	...	2,677-50 (Industrial loan by Khadi Board).

ಶ್ರೀ ಅಂದಾನಯ್ಯ.—ಚಿಕ್ಕೋನಹಳ್ಳಿಯಲ್ಲಿ ಮೂರು ಸೊಸೈಟಿಗಳು ಕೆಲಸ ಮಾಡುತ್ತಿವೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಅಲ್ಲಿ ಒಟ್ಟು ನಾಲ್ಕು ಸೊಸೈಟಿಗಳು ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

Sri K. PUTTASWAMY.—According to the information that Government have been able to collect, there are only three societies.

ಶ್ರೀ ಕೆ. ಲಕ್ಕಪ್ಪ.—ಚಿಕ್ಕೋನಹಳ್ಳಿ ಸರ್ವಿಸ್ ಕೋ-ಆಪರೇಟಿವ್ ಸೊಸೈಟಿಗೆ ಯಾವ ವರ್ಷದಿಂದ ಗ್ರಾಂಟನ್ನು ಕೊಡಲಾಗಿದೆ, ಮತ್ತು ಸಾಲವನ್ನು ಹಂಚಿರತಕ್ಕ ಸಹಕಾರ ಸಂಘದವರು ಅದನ್ನು ವಸೂಲ್ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಸಾಲ ಕೊಟ್ಟಿರುವುದು year before last year, ಅವರು ಡಿಫಾಲ್ಟರಾಗಿರುವುದರಿಂದ ಈಚೆಗೆ ಸಾಲವನ್ನು ಕೊಟ್ಟಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಸೊಸೈಟಿಗೆ 12,175 ರೂಪಾಯಿ ಪ್ರಾಡ್ಯೂಸ್ ಲೋನ್ ಕೊಡಲಾಗಿದೆ. ಆದರೆ ಪ್ರಾಡ್ಯೂಸ್ ಇಲ್ಲದೆ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಸೊಸೈಟಿಯವರು ಪ್ರಾಡ್ಯೂಸ್ ಲೋನ್ ಕೊಡುವಾಗ ಅವರವರ ಮನೆಯಲ್ಲಿಯೇ ಇದ್ದ ಪ್ರಾಡ್ಯೂಸ್ ಮೇಲೆ ಸಾಲವನ್ನು ಕೊಡುತ್ತಿದ್ದರು. ಆದರೆ ಸಾಲ ಪಡೆದವರು ಇವರನ್ನು ಕೇಳದೆ ದವಸವನ್ನು ಮಾರಿದ್ದಾರೆ. ಅಂಥವರ ಮೇಲೆ ಕ್ರಮ ಜರುಗಿಸುತ್ತಿರಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಚಿಕ್ಕೋನಹಳ್ಳಿಯಲ್ಲಿ ಒಂದು ಜಾಯಿಂಟ್ ಫಾರ್ಮಿಂಪಿ ಸೊಸೈಟಿ ಇದೆ. ಇದಲ್ಲದೆ ಬನಪೇಶ್ವರ ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಇದ್ದು ಇದಕ್ಕೆ ಸರ್ಕಾರದವರು ಕುಮ್ಮಕ್ಕು ಮಾಡಬೇಕು ಎಂದು ಇದ್ದಾರೆ. ಒಂದೇ ಗ್ರಾಮದಲ್ಲಿ ಎರಡು ಫಾರ್ಮಿಂಗ್ ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡುವುದು ಸೊಸೈಟಿ ಕಾನೂನು ಪ್ರಕಾರ ವಿರೋಧವಲ್ಲವೇ, ಸ್ವಾಮಿ ?

Sri K. PUTTASWAMY.—I have already submitted that according to the information that Government have collected, there are only three societies. My friend is referring to a fourth society. There is absolutely no objection for more than one joint forming co-operative society to be located in any particular place.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಮೂರು ಸೊಸೈಟಿಗಳಲ್ಲಿ ಯಾವ ಸೊಸೈಟಿಯಲ್ಲಾದರೂ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅಂಥವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

Sri K. PUTTASWAMY.—It is learnt that there is one man who is the Secretary of all the three societies. That is what is given here. There is an allegation of misappropriation of Rs. 1,500 committed in Oil Gana Industrial Co-operative Society by the Secretary. Notice has been issued for recovery of the amount. Further steps are being taken.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ಕೊಟ್ಟಿದ್ದಾರೆ, ಇನ್ನೂ ವಸೂಲಾಗಿಲ್ಲ ಎಂದು ಹೇಳಿದ್ದಾರೆ. ಅನೇಕ ಜನ ರೈತರು ದುಡ್ಡು ವಾಪಸು ಕೊಟ್ಟಿದ್ದು ಅವರಿಗೆ ಸಂಬಂಧಪಟ್ಟ ಸೆಕ್ರೆಟರಿಯವರು ರಸೀದಿಗಳನ್ನು ಕೊಡದೆ ಇರುತ್ತಾರೆ. ಸರ್ಕಾರ ಈ ಬಗ್ಗೆ ವಿಚಾರ ಮಾಡಿ ಅದನ್ನು ಸೂಪರ್‌ಸೀಡ್ ಮಾಡಿ ಅಲ್ಲಿರುವ ಅವ್ಯವಸ್ಥೆಯನ್ನು ಸರಿ ಮಾಡುತ್ತಾರೆಯೇ ?

Mr. SPEAKER.—Is it a supplementary ? It is based on facts, not established. It is a suggestion for action.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದಕ್ಕಿಂತ ಹೆಚ್ಚು ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಒಂದು ಗ್ರಾಮದಲ್ಲಿರಬಹುದು ಎಂದು ಹೇಳಿದರು. ಮೊನ್ನೆ ತಾನೆ ಅಂಗೀಕಾರವಾದ ಭೂ ಸುಧಾರಣೆ ಮಸೂದೆಯಲ್ಲಿ ಒಂದು ಗ್ರಾಮದಲ್ಲಿ ಒಂದೇ ಫಾರ್ಮಿಂಗ್ ಸೊಸೈಟಿ ಇರಬೇಕು, ಅದಕ್ಕೇ ಎಲ್ಲರೂ ಸದಸ್ಯರಾಗಿರಬೇಕು ಎನ್ನುವ ತತ್ವಕ್ಕೆ ಇದು ವಿರೋಧವಾಗಿಲ್ಲವೇ, ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ತತ್ವವೆ ನಿರೂಪಣೆಯಾಗಿರುವುದು ನನಗೆ ಗೊತ್ತಿಲ್ಲ. ನಮ್ಮ ಇಲಾಖೆಯಲ್ಲಿನ ನಿಬಂಧನೆಗಳ ಪ್ರಕಾರ ಒಂದೇ ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚು ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಇರುವುದಕ್ಕೆ ಅವಕಾಶವಿದೆ.

Sri K. LAKKAPPA.—Service Co-operative Society default, or defunct...

Mr. SPEAKER.—Service Co-operative society default ?

Sri K. LAKKAPPA.—It is not functioning and they are unable to collect the loan granted to the ryots.....

Mr. SPEAKER.—The member may kindly recast his question.

Sri SANJEEVANATH AIKALA.—Is it not a fact that the produce loan has to be recovered a year after giving the loan ? In that case, when exactly was the loan given.....

Mr. SPEAKER.—Ordinary advance on condition of recovery from succeeding year, is not the produce loan ?

Sri SANJEEVANATH AIKALA.—It is produce loan and it has to be recovered a year after it is given. When was this given on these three items ? On what date the produce loan has been given ?

Mr. SPEAKER.—He wants the date. If the Hon'ble Minister has not got the dates, he may say Notice.

Sri K. PUTTASWAMY.—The loan of Rs. 12,175 has been given as produce loan. It has not been recovered. I have already submitted that it was two years before.

ಶ್ರೀ ಕೆ. ಲಕ್ಕಪ್ಪ.—ಈ ಸಹಕಾರಿ ಸಂಘದಲ್ಲಿ ದುಃಪಯೋಗವಾಗಿರುವುದು ಮತ್ತು ಈ ಸಂಘ ಕೆಲಸ ಮಾಡದೆ ಇರುವುದಕ್ಕೆ ಕಾರಣ ಮತ್ತು ಇದರ ಮೇಲೆ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣ ಹಿಂದೆ ಇದ್ದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಈ ಸಂಘದ ಸೆಕ್ರೆಟರಿಯಾಗಿರುವವರು ಹೊಂದಾಣಿಕೆ ಮಾಡಿಕೊಂಡು ಆದರಲ್ಲಿನ ಹಣವನ್ನು ಅವರು ಭಾಗ ಮಾಡಿ ಹಂಚಿಕೆ ನಡೆಯುತ್ತಿರುವ ವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಬಗ್ಗೆ ಅವರ ಮೇಲೆ ಕ್ರಮ ಈಗ ಸರ್ಕಾರದವರು ತೆದುಕೊಳ್ಳುತ್ತಾರೆಯೇ ?

Sri K. PUTTASWAMY.—Sir, this.....

Mr. SPEAKER.—Insinuation ?

Sri K. PUTTASWAMY.—Sir, this is a very grave insinuation.

Sri K. LAKKAPPA.—Is it not a fact that the Assistant Registrar has been transferred on the ground.....

Mr. SPEAKER.—Sri Andanaiah wants to say.....

ಶ್ರೀ ಅಂದಾನಯ್ಯ.—ಚಿಕ್ಕೋನಹಳ್ಳಿ ಸರ್ವಿಸ್ ಕೋ-ಆಪರೇಟಿವ್ ಸೊಸೈಟಿಗೆ 70 ಸಾವಿರ ರೂಪಾಯಿ ಸಾಲ ಕೊಟ್ಟಿದ್ದಾರೆ. ಈ ಪೈಕಿ 28 ಸಾವಿರ ರೂಪಾಯಿ ವಸೂಲಾಗಿದ್ದು 42 ಸಾವಿರ ರೂಪಾಯಿ ಎಷ್ಟು ವರ್ಷದಿಂದ ಬಾಕಿ ಇದೆ, ಅದನ್ನು ವಸೂಲ್ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರ ಅಲ್ಲಿನ ಸಹಕಾರ ಸಂಘಕ್ಕೇ ಸಂಬಂಧಪಟ್ಟದ್ದು. ಆ ಸಹಕಾರ ಸಂಘದವರು ಕ್ರಮ ತೆಗೆದುಕೊಳ್ಳಬೇಕು. ಅವರು ಕ್ರಮ ತೆಗೆದುಕೊಳ್ಳದೇ ಹೋದರೆ ಸರ್ವಸದಸ್ಯರು ಆ ಆಡಳಿತ ಮಂಡಳಿಯ ಮೇಲೆ ಹತೋಟಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆಡಳಿತ ಮಂಡಳಿ ಅಥವಾ ಸರ್ವಸದಸ್ಯರ ಸಭೆ ಯಾವರೀತಿಯ ಕ್ರಮವನ್ನೂ ತೆಗೆದುಕೊಳ್ಳದೆ ಹೋದರೆ ಆಗ ಸರ್ಕಾರ ಅದರ ಮೇಲೆ ಕ್ರಮ ಜರುಗಿಸತಕ್ಕ ಆಲೋಚನೆಯನ್ನು ಮಾಡುತ್ತದೆ.

Sri K. LAKKAPPA.—Is it not a fact that the Vigilance Commission has started an enquiry against the previous Assistant Registrar of Co-operative Societies, Tumkur, with respect to the joint co-operative farming societies, and even in respect of this ?

Sri K. PUTTASWAMY.—I do not know that information.